aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Social Science (Paper 4, Kannada Medium)

EXAM	YEAR	TYPE	SUBJECT
Karnataka Class 10	2027	Sample Paper	Social Science

85-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 4

S.S.L.C. MODEL QUESTION PAPER - 4 : 2026-27

ವಿಷಯ : ಸಮಾಜವಿಜ್ಞಾನ

Subject : SOCIAL SCIENCE

ವಿಷಯ ಸಂಕೇತ : 85-K **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 80] [Max. Marks : 80

ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ: **8 X 1 = 8**

1. ವೆಲ್ಲೆಸ್ಲಿಯು ಕೊಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ಪ್ರಾರಂಭಿಸಿದರು, ಏಕೆಂದರೆ,

   {A} ಇಂಗ್ಲೀಷ್ ಶಿಕ್ಷಣವನ್ನು ನೀಡಲು

   (B) ಉನ್ನತ ಶಿಕ್ಷಣವನ್ನು ಅಭಿವೃದ್ಧಿಪಡಿಸಲು

   (C) ತಾಂತ್ರಿಕ ಶಿಕ್ಷಣವನ್ನು ಅಭಿವೃದ್ಧಿಪಡಿಸಲು

   (D) ನಾಗರಿಕ ಸೇವೆಗೆ ಸೇರುವವರಿಗೆ ಶಿಕ್ಷಣ ನೀಡಲು

2. ಮೊದಲನೇ ಮಹಾಯುದ್ದದ ಸಂದರ್ಭದಲ್ಲಿ 'ಕದನ ಬಾಂದವ್ಯತ್ರಯ'ವನ್ನು ರಚಿಸಿಕೊಂಡ ರಾಷ್ಟ್ರಗಳ ಗುಂಪು

   {A} ಜರ್ಮನಿ. ಸ್ಪೇನ್. ಹಂಗೇರಿ

   (B) ಬ್ರಿಟನ್. ಫ್ರಾನ್ಸ್. ರಷ್ಯಾ

   (C) ಜರ್ಮನಿ. ಜಪಾನ್. ಫ್ರಾನ್ಸ್

   (D) ಬ್ರಿಟನ್. ಸ್ಪೇನ್. ರಷ್ಯಾ

3. ಅಂತರರಾಷ್ಟ್ರೀಯ ಹಣಕಾಸು ನಿಧಿಯನ್ನು 'ವಿಶ್ವ ವ್ಯಾಪಾರ ಮತ್ತು ವಾಣಿಜ್ಯದ ತೃತೀಯ ಆರ್ಥಿಕ ಆಧಾರ ಸ್ಥಂಭ' ಎಂದು ಕರೆಯಲು ಕಾರಣ, ಅದು

   {A} ರಾಷ್ಟ್ರಗಳ ನಡುವೆ ಧಾರ್ಮಿಕ ಸಾಮರಸ್ಯವನ್ನು ಸ್ಥಾಪಿಸುತ್ತದೆ

   (B) ದೇಶಗಳ ನಡುವೆ ಸಾಂಸ್ಕೃತಿಕ ಬಾಂದವ್ಯವನ್ನು ಪ್ರೋತ್ಸಾಹಿಸಿಸುತ್ತದೆ

   (C) ದೇಶಗಳ ಮುಕ್ತ ವ್ಯಾಪಾರ ಜಾರಿಯಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ

   (D) ಗಡಿ ವಿವಾದಗಳನ್ನು ಪರಿಹರಿಸಿಕೊಳ್ಳಲು ರಾಷ್ಟ್ರಗಳಿಗೆ ನೆರವು ನೀಡುತ್ತದೆ.

4. 'ಮಾನವ ಕುಲಂ ತಾನೊಂದೆ ವಲಂ" ಹೇಳಿಕೆಯನ್ನು ನೀಡಿದವರು

   {A} ರನ್ನ

   (B) ಪೊನ್ನ

   (C) ಪಂಪ

   (D) ಜನ್ನ

5. ಮೌನ ಕಣಿವೆ ಆಂದೋಲನವನ್ನು ಪ್ರಾರಂಭಿಸಲಾಯಿತು, ಏಕೆಂದರೆ

   {A} ಅಣೆಕಟ್ಟು ನಿರ್ಮಾಣವನ್ನು ನಿಲ್ಲಿಸಲು

   (B) ರಾಜ್ಯಗಳ ನಡುವಿನ ನೀರಿನ ವಿವಾದಗಳನ್ನು ಪರಿಹರಿಸಲು.

   (C) ರಾಜಕೀಯ ಸಾಮರಸ್ಯವನ್ನು ಸ್ಥಾಪಿಸಲು

(D) ಕೇರಳದಲ್ಲಿ ಗಣಿಗಾರಿಕೆಯನ್ನು ನಿಲ್ಲಿಸಲು

6. ಚಂದ್ರನ ದಕ್ಷಿಣ ಧ್ರುವದ ಬಳಿ ಬಾಹ್ಯಕಾಶ ನೌಕೆಯನ್ನು ಇಳಿಸಿದ ಮೊದಲ ದೇಶ

{A} ಭಾರತ

(B) ಸೋವಿಯತ್ ರಷ್ಯಾ

(C) ಅಮೇರಿಕಾ ಸಂಯುಕ್ತ ಸಂಸ್ಥಾನ

(D) ಇಂಗ್ಲೆಂಡ್

7. ಈ ಮುಂದಿನವುಗಳಲ್ಲಿ ಪ್ರತ್ಯಕ್ಷ ತೆರಿಗೆಗೆ ಉದಾಹರಣೆಯಾಗಿರುವುದು

{A} ವಿದೇಶಿ ಪ್ರವಾಸದ ಮೆಲಿನ ತೆರಿಗೆ

(B) ಸರಕು ಮತ್ತು ಸೇವಾ ತೆರಿಗೆ

(C) ಆದಾಯ ತೆರಿಗೆ

(D) ಆಮದು–ರಫ್ತು ತೆರಿಗೆ

8. ಆರ್ಥಿಕತೆಯ ಯಂತ್ರದಲ್ಲಿ ವಿದ್ಯುತ್ ಸಂಚರಿಸಲು ಸಹಕಾರಿಯಾಗುವ ಅಗ್ನಿ ಬಿರಟೆ ಯಾರೆಂದರೆ

{A} ಉದ್ದಿಮೆದಾರ

(B) ವ್ಯಾಪಾರಿ

(C) ಗ್ರಾಹಕ

(D) ವಿಮಾಗಾರ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ: **8 X 1 = 8**

9. ಚಿಕಾಗೋದಲ್ಲಿ ಜರುಗಿದ ವಿಶ್ವ ಧಾರ್ಮಿಕ ಸಂಸತ್ತಿನಲ್ಲಿ ಭಾಗವಹಿಸಲು ಸ್ವಾಮಿ ವಿವೇಕಾನಂದರಿಗೆ ಮೈಸೂರಿನ ಯಾವ ದೊರೆಯು ಸಹಾಯ ನೀಡಿದರು?
10. ರಾಷ್ಟ್ರಗಳ ಸಂಘವನ್ನು ಮೊದಲನೇ ಮಹಾಯುದ್ದದ ನಂತರ ಏಕೆ ಸ್ಥಾಪನೆಯಾಯಿತು?
11. ಸಾರ್ಕನ ಕೇಂದ್ರ ಕಛೇರಿ ಎಲ್ಲಿ ಸ್ಥಿತಗೊಂಡಿದೆ?
12. ಚಿಪ್ಕೋ ಚಳವಳಿಯ ಮುಖ್ಯ ನಾಯಕರು ಯಾರು?
13. ನಿರ್ಗಮಾನ ಮಾನ್ಸೂನ್ ಮಾರುತಗಳ ಕಾಲದಲ್ಲಿ ಉಷ್ಣವಲಯದ ಚಂಡಮಾರುತಗಳು ಬಂಗಾಳ ಕೊಲ್ಲಿಯಲ್ಲಿ ಆಗಾಗ ಸಂಭವಿಸುತ್ತವೆ. ಏಕೆ?
14. ವ್ಯವಹಾರಸ್ಥರು ಮತ್ತು ಕೈಗಾರಿಕೋದ್ಯಮಿಗಳು ಚಾಲ್ತಿಖಾತೆಯನ್ನು ತೆರೆಯಲು. ಏಕೆ ಆದ್ಯತೆ ನೀಡುವರು?
15. ಜಿ.ಪಿ.ಎಸ್ ವ್ಯವಸ್ಥೆಯು 'ಮಾರ್ಗದರ್ಶಕ' ನಾಗಿ ಹೇಗೆ ಕಾರ್ಯ ನಿರ್ವಹಿಸುವುದು?
16. ಉದ್ಯೋಗಾವಕಾಶಗಳನ್ನು ಒದಗಿಸುವ ಸರ್ಕಾರದ ಯೋಜನೆಯೊಂದನ್ನು ಹೆಸರಿಸಿ.

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ: **8 X 2 = 16**

17. ನೇಮಕಾತಿಯ ಪ್ರಕಾರಗಳು ಯಾವುವು?

ಅಥವಾ

ಆಹಾರ ಮತ್ತು ಕೃಷಿ ಸಂಸ್ಥೆಯ ಉದ್ದೇಶಗಳು ಯಾವುವು?

18. ಬಾಲ ಕಾರ್ಮಿಕತೆಯ ಪರಿಣಾಮಗಳನ್ನು ವಿವರಿಸಿ.

ಅಥವಾ

ಅಸ್ಪೃಶ್ಯತೆಯು ಒಂದು ಸಾಮಾಜಿಕ ಪಿಡುಗು ಆಗಿದೆ. ವಿವರಿಸಿ.

19. ಪಂಚವಾರ್ಷಿಕ ಯೋಜನೆಗಳ ಮುಖ್ಯ ಉದ್ದೇಶಗಳನ್ನು ವಿವರಿಸಿ.

20. ಗ್ರಾಹಕರು ಎದುರಿಸುತ್ತಿರವ ಸಮಸ್ಯೆಗಳಾವುವು?

21. ಮೂರನೇ ಆಂಗ್ಲೋ–ಮರಾಠ ಯುದ್ದವು ಮರಾಠರ ಅವನತಿಗೆ ನಾಂದಿಯಾಯಿತು. ಈ ಹೇಳಿಕೆಯನ್ನು ಸಮರ್ಥಿಸಿ.

22. ಮಧ್ಯ ಪ್ರದೇಶ ರಾಜ್ಯದ ಯಾವುದಾದರೂ ಎರಡು ಜಲವಿದ್ಯುತ್ ಯೋಜನೆಗಳನ್ನು ತಿಳಿಸಿ.

23. ಭಾರತದಲ್ಲಿ ಹತ್ತಿಯು ಅತಿ ಮುಖ್ಯ ನಾರಿನ ಬೆಳೆಯಾಗಿದೆ. ಏಕೆ?

24. ಭಾರತದ ಒಕ್ಕೂಟದಲ್ಲಿ ಗೋವಾದ ವಿಲೀನವನ್ನು ವಿವರಿಸಿ

IV. ಈ ಪ್ರತಿಯೊಂದು ಪ್ರಶ್ನೆಗೆ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರ ಬರೆಯಿರಿ **9 X 3 = 27**

25. ಡಚ್ಚರ ವಿರುದ್ಧ ಮಾರ್ತಾಂಡವರ್ಮನ ಹೋರಾಟವನ್ನು ವಿವರಿಸಿ.

ಅಥವಾ

ರೈತವಾರಿ ಪದ್ದತಿಯ ಲಕ್ಷಣಗಳನ್ನು ವಿವರಿಸಿ.

26. ಅರಣ್ಯನಾಶಕ್ಕೆ ಕಾರಣಗಳೇನು?

ಅಥವಾ

ದೂರ ಸಂವೇದಿ ತಂತ್ರಜ್ಞಾನದಿಂದಾಗುವ ಉಪಯೋಗಗಳೇನು?

27. ಗ್ರಾಮೀಣ ಭಾರತದ ಆರ್ಥಿಕ ಪರಿಸ್ಥಿತಿಗಳನ್ನು ವಿವರಿಸಿ.

ಅಥವಾ

ಕೇಂದ್ರ ಸರ್ಕಾರದ ಯೋಜನೇತರ ವೆಚ್ಚಗಳು ಯಾವುವು?

28. ಬ್ಯಾಂಕುಗಳ ಕಾರ್ಯಗಳಾವುವು

ಅಥವಾ

ಉದ್ದಿಮೆದಾರರಿಗೆ ಇರುವ ಸ್ವ–ಉದ್ಯೋಗದ ಅವಕಾಶಗಳು ಯಾವುವು?

29. ಭಾರತದ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣ ಚಳವಳಿಯಲ್ಲಿ ಶ್ರೀ ನಾರಾಯಣ ಗುರು ಧರ್ಮಪರಿಪಾಲನ ಯೋಗಂನ ಪಾತ್ರವು ಮಹತ್ತರವಾದುದಾಗಿದೆ. ಸಮರ್ಥಿಸಿ.

30. ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮದ ಪರಿಣಾಮಗಳನ್ನು ವಿಶ್ಲೇಷಿಸಿ.

31. ಮಾನವ ಹಕ್ಕುಗಳನ್ನು ರಕ್ಷಿಸಲು ಭಾರತವು ಕೈಗೊಂಡಿರುವ ಕ್ರಮಗಳನ್ನು ತಿಳಿಸಿ.

32. ನಿರುದ್ಯೋಗದ ಕಾರಣಗಳನ್ನು ವಿವರಿಸಿ.

33. ಭಾರತವು ಎದುರಿಸುತ್ತಿರುವ ನೈಸರ್ಗಿಕ ವಿಕೋಪಗಳಲ್ಲಿ ಪ್ರವಾಹಗಳು ಅತ್ಯಂತ ಅಪಾಯಕಾರಿಯಾದವುಗಳು. ದೃಢೀಕರಿಸಿ.

V. ಈ ಪ್ರತಿಯೊಂದು ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. **4 X 4 = 16**

34. ಭಾರತದ ಸ್ವಾತಂತ್ರ ಹೋರಾಟದಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.

ಅಥವಾ

ಅನಿಬೆಸೆಂಟರ ಕೊಡುಗೆಗಳನ್ನು ವಿವರಿಸಿ.

35. ನಾವು ಹೇಗೆ ಮಣ್ಣಿನ ಸಂರಕ್ಷಣೆ ಮಾಡಬಹುದು?

ಅಥವಾ

ಮಾನವನ ಆರ್ಥಿಕ ಚಟುವಟಿಕೆಗಳಲ್ಲಿ ಕೈಗಾರಿಕೆಗಳು ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುವುವು. ಹೇಗೆ?

36. ಹದಿನೆಂಟನೆಯ ಶತಮಾನವನ್ನು ಭಾರತದಲ್ಲಿ ರಾಜಕೀಯ ಸಮಸ್ಯೆಗಳ ಶತಮಾನ ಎಂದು ಏಕೆ ಕರೆಯುವರು?

37. ಲಿಂಗತ್ವ ಅಲ್ಪಸಂಖ್ಯಾತರ ಸ್ಥಾನಮಾನವನ್ನು ಸುಧಾರಿಸಲು ಸರ್ಕಾರಗಳು ಹೇಗೆ ಪ್ರಯತ್ನಿಸುತ್ತಿವೆ?

VI. 38. ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನ ಯಾವುದಾದರೂ ಐದನ್ನು ಗುರುತಿಸಿ: **5 X 1 = 5**

a) $23^0 30^1$ ಉತ್ತರ ಅಕ್ಷಾಂಶ

b) ರಾಣಪ್ರತಾಪ ಸಾಗರ

c) ನೀಲಗಿರಿ ಬೆಟ್ಟಗಳು

d) ಬಾಂಬೆ ಹೈ

e) ದಾವಣಗೆರೆ

f) ವಿಶಾಖಪಟ್ಟಣಂ

g) ಭಾರತದ ಚಹಾದ ಬಂದರು.

h) ದಾಮೋದರ್ ಯೋಜನೆ

i) ಮೌಂಟ್ ಗಾಡ್ವಿನ್ ಆಸ್ಟಿನ್

j) ಕೈಗಾ

ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ (ಪ್ರಶ್ನೆ ಸಂಖ್ಯೆ 38 ಕ್ಕೆ ಬದಲಾಗಿ)

ಹಿಮಾಲಯ ಪರ್ವತ ಪ್ರದೇಶಗಳ ಪ್ರಾಮುಖ್ಯತೆಗಳಾವುವು?.

ಅಥವಾ

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳಶವುವು?